# ಅಧ್ಯಾಯ – ೫ Chapter-5

# ಉಪಸಂಹಾರ

Conclusion

# ಅಧ್ಯಾಯ : ಐದು

## ಉಪಸಂಹಾರ

ಪ್ರಸಕ್ತ ಸಮಾಜದ ಸ್ಥಿತಿಗತಿಯ ಬಗ್ಗೆ ಅಧ್ಯಯನ ಮಾಡಿದಾಗ ಮಹಿಳಾಪರಾಧವೆಂಬುದು ಅಗಾಧ ಪ್ರಮಾಣದಲ್ಲಿ ಬೆಳೆಯುತ್ತಿರುವುದು ಕಂಡುಬರುತ್ತದೆ. ಸಮಾಜ ಹಾಗೂ ವೈಯಕ್ತಿಕ ನೆಲೆಯಲ್ಲಿ ನಡೆಯುತ್ತಿರುವ ಈ ಮಹಿಳಾಪರಾಧಗಳ ಬಗ್ಗೆ ಹೆಚ್ಚು ಹೆಚ್ಚು ವಿಚಾರಿಸಿದಂತೆಲ್ಲ ಅಪರಾಧಿಕ ನಡತೆ, ಪರಿಸ್ಥಿತಿ ಮತ್ತು ಪರಿಸರಗಳಿಂದ ಉತ್ಪಾದನೆಯಾಗುವಂತದು. ಆದಕ್ಕಾಗಿ ಮಹಿಳೆಯರು ಅಪರಾಧಿಗಳಾಗಲು ಅವರ ಸಾಮಾಜಿಕ, ಆರ್ಥಿಕ ಹಿನ್ನೆಲೆಯೇ ಪ್ರಮುಖ ಪಾತ್ರ ವಹಿಸುತ್ತದೆಂದು ಹೇಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಹಿಳಾಪರಾಧದ ಬಗ್ಗೆ ತಿಳಿದುಕೊಳ್ಳಬೇಕಾದರೆ ಮಹಿಳಾಪರಾಧಿಗಳ ಸಾಮಾಜಿಕ-ಆರ್ಥಿಕ ಮತ್ತು ಇತರ ಅಂಶಗಳಾಧಾರದ ಮೇಲೆ ವ್ಯಕ್ತಿಗತ ಅಧ್ಯಯನದಿಂದ ಮಾತ್ರ ಸಾಧ್ಯವಾಗುತ್ತದೆ.

ಬಹಳಷ್ಟು ಮಹಿಳಾಪರಾಧಿಗಳು ವಿವಾಹಿತ ಯುವ ಮಹಿಳೆಯರಾಗಿದ್ದು ಇವರೆಲ್ಲ ಮೊದಲು ಸಲ ಅಪರಾಧವೆಸಗಿದ್ದಾರೆ. ಇವರಲ್ಲಿ ಮಾನವ ದೇಹಕ್ಕೆ ಸಂಬಂಧಿಸಿದ ಅಪರಾಧಗಳನ್ನೆಸಗಿದ ಆದರಲ್ಲೂ ತಮ್ಮ ಗಂಡನನ್ನು ಕೊಲೆ ಮಾಡಿದ ಪ್ರಕರಣಗಳಿಗೆ ಸಂಬಂಧಿಸಿದ ಮಹಿಳಾಪರಾಧಿಗಳ ಸಂಖ್ಯೆ ಗಣನೀಯವಾಗಿದೆ. ಮದುವೆಯಾದ ಹದಿ ಹರೆಯದವರಲ್ಲಿ ಅಪರಾಧವಾಗಲು ಕಾರಣವೆಂದರೆ ಅವರ ಏಕಾಂಗಿತನ ಮತ್ತು ಹದಗೆಟ್ಟ ಮನೋಸ್ಥೈರ್ಯ. ಇಂಥವರು ಅಪರಾಧ ಮಾಡಲು ಇನ್ನೊಂದು ಸ್ವಾಭಾವಿಕ ಕಾರಣವೆಂದರೆ ಇಂದಿನ ಮಹಿಳೆ ತನ್ನನ್ನು ಮುಂದುವರೆದ ಕುಟುಂಬದೊಂದಿಗೆ ಹೋಲಿಸಿ ನೋಡಿದಾಗ ತನ್ನ ಸ್ಥಾನ-ಮಾನ ಕಡಿಮೆ ಕಂಡಲ್ಲಿ, ದುಗುಡ, ದ್ವಂದ್ವ ಸುರುವಾಗುತ್ತದೆ. ಸಾಮಾಜಿಕ, ಆರ್ಥಿಕ ಒತ್ತಡಗಳಿಂದ ಅಪರಾಧಕ್ಕಿಳಿಯುತ್ತಾಳೆ.

ಮಹಿಳಾಪರಾಧದ ಸ್ವರೂಪ ಮತ್ತು ಮಹಿಳೆಯರು ಎಸಗುವ ಅಪರಾಧದ ಪ್ರಕಾರಗಳನ್ನು ಗಮನಿಸಿದಾಗ ಮಹಿಳಾಪರಾಧಿಗಳಲ್ಲಿ ಹೆಚ್ಚಿನವರು ಮಾನವ ದೇಹಕ್ಕೆ ಸಂಬಂಧಿಸಿದ ಅಪರಾಧಗಳನ್ನೆಸಗಿದ್ದುದು ಹೆಚ್ಚು. ನಂತರ ಸ್ವತ್ತಿನ ಅಪರಾಧಗಳು (Property Offences) ಇವುಗಳಲ್ಲಿ ಮುಖ್ಯವಾಗಿ ಕೊಲೆ, ಕೊಲೆಗೆ ಯತ್ನ, ಕಳುವು, ಮೋಸ ಮತ್ತು ವಂಚನೆ ಪ್ರಮುಖವಾದವುಗಳು.

ಹೆಚ್ಚುತ್ತಿರುವ ಮಹಿಳಾಪರಾಧಕ್ಕೆ ಇಂದಿನ ಸಮಾಜದಲ್ಲಿ ಬದಲಾದ ಮಹಿಳೆಯರ ಸ್ಥಾನಮಾನಗಳು. ಅದನ್ನೆ ಬದಲಾದ ಮಹಿಳೆಯ ಪಾತ್ರ ಎಂದರೂ ನಡೆಯುತ್ತದೆ. ಇದಕ್ಕೆ ಪೂರಕವಾಗಿ ಹೇಳಬೇಕಾದುದೆಂದರೆ ಇಂದಿನ ಸ್ತ್ರೀವಾದ ಮತ್ತು ಮಾನವ ಹಕ್ಕುಗಳ ಕೂಗು, ಇಂಥವುಗಳಿಂದಲೂ ನಮ್ಮ ವ್ಯವಸ್ಥೆಯಲ್ಲಾದ ಸಡಿಲಿಕೆಯಿಂದ ಮಹಿಳೆಯರು ಸ್ವಚ್ಛಂದದ ಬದುಕು ಬಯಸಿ ಅಡ್ಡ ದಾರಿಗಳನ್ನು ಹಿಡಿಯುತ್ತಿದ್ದಾರೆ. ಅಂದರೆ ಕಾನೂನುಗಳನ್ನು ತಮ್ಮ ಸ್ವ ಹಿತಾಸಕ್ತಿಗಾಗಿ ದುರುಪಯೋಗ ಪಡಿಸಿಕೊಳ್ಳುವ ಒಂದು ವರ್ಗದ ಮಹಿಳೆಯರು ಕಟ್ಟಳೆಗಳನ್ನು ಮುರಿಯುವುದೇ ತಮ್ಮ ಸ್ವಾತಂತ್ರ್ಯವೆಂದು ಭಾವಿಸಿದಂತಿದೆ. ಅದೇನೆ ಇರಲಿ ಇಲ್ಲಿ ಸ್ಪಷ್ಟಪಡಿಸಲೇಬೇಕಾದ ಅಂಶವೆಂದರೆ ಮಹಿಳಾಪರಾಧಕ್ಕೆ ಮುಖ್ಯವಾಗಿ ಪರಿಸರ ಕಾರಣವಾಗಿದೆ. ಮಹಿಳೆಯರು ಅಪರಾಧಿಕ ನಡುವಳಿಕೆಯನ್ನು ಹೊಂದುವಂಥ ಪರಿಸ್ಥಿತಿಯು ಪರಿಸರದಿಂದ ನಿರ್ಮಾಣವಾಗಿರುತ್ತದೆ. ಆದುದರಿಂದ ಆಧುನಿಕ ಮಹಿಳೆ ಅಪರಾಧ ಮಾಡುವಂಥ ಅವಕಾಶವನ್ನು ಪರಿಸ್ಥಿತಿ ಮತ್ತು ಪರಿಸರವು ತಂದೊಡ್ಡುತ್ತವೆ. ಮುಖ್ಯವಾಗಿ ಕೌಟುಂಬಿಕ ಬಿಕ್ಕಟ್ಟುಗಳು, ಉದ್ಯೋಗ ನಿಮಿತ್ಯ ಹೆಚ್ಚು ಸಮಯ ಮನೆ ಹೊರಗಿರುವುದು, ಒತ್ತಾಯಪೂರ್ವಕ ವಿವಾಹ, ಕೆಟ್ಟ ಪರಿಸರ, ಲಿಂಗ-ತಾರತಮ್ಯ, ಅನಕ್ಷರತೆ, ಲೈಂಗಿಕ ಸಮಸ್ಯೆ, ಅಭಿಪ್ರಾಯ ಬೇಧ, ಸಹವಾಸ ದೋಷ, ಮಾನಸಿಕ ಮತ್ತು ದೈಹಿಕ ವಿಕಲತೆ ಇತ್ಯಾದಿಗಳು. ಇವುಗಳನ್ನು ವ್ಯವಸ್ಥಿತ ಅಧ್ಯಯನದ ಹಿತದೃಷ್ಟಿಯಿಂದ ಸಾಮಾಜಿಕ-ಆರ್ಥಿಕ, ಸಾಮಜಿಕ-ಕೌಟುಂಬಿಕ ಮತ್ತು ಸಾಮಾಜಿಕ -ಸಾಂಸ್ಕೃತಿಕ ಕಾರಣಗಳಡಿಯಲ್ಲಿ ತರಲಾಗಿದೆ.

ಮಹಿಳಾಪರಾಧಿಗಳನ್ನು ತೆಗೆದುಕೊಂಡಾಗ ಅವರಲ್ಲಿ ಬಹುಸಂಖ್ಯಾತ ಮಹಿಳಾಪರಾಧಿಗಳು ಹಿಂದುಳಿದ ಮತ್ತು ಕೆಳಜಾತಿಯವರು, ಬಡವರು ಮತ್ತು ಕೃಷಿ ಕಾರ್ಮಿಕ ವರ್ಗಕ್ಕೆ ಸೇರಿದ ಅತೀ ಕಡಿಮೆ ಆದಾಯ ಹೊಂದಿದಂತವರಾಗಿದ್ದಾರೆ. ಮಹಿಳಾಪರಾಧಿಗಳು ಎಸಗಿದ ಅಪರಾಧಗಳ ಬಗ್ಗೆ ಗಮನ ಹರಿಸಿದಾಗ ಬಹಳಷ್ಟು

ಅಪರಾಧಿಗಳಿಗೆ ಒಂದು ಪ್ರಮುಖ ಕಾರಣವೆಂದರೆ ಲೈಂಗಿಕ ಹಗರಣವಾಗಿದೆ. ಇದರ ಪರಿಣಾಮ ಕುಟುಂಬದ ಸದಸ್ಯರಲ್ಲಿ, ಸಂಬಂಧಿಕರಲ್ಲಿ ಮತ್ತು ನೆರೆಹೊರೆಯವರಲ್ಲಿ ತಪ್ಪು ತಿಳುವಳಿಕೆಗಳಾಗಿ ಅಪರಾಧಗಳು ಘಟಿಸಿದ್ದುದು ಕಂಡುಬರುತ್ತದೆ.

ಇಂದಿನ ದಿನಮಾನಗಳಲ್ಲಿ ಅಪರಾಧಗಳನ್ನು ನಿಯಂತ್ರಿಸುವುದು ದೊಡ್ಡ ಸವಾಲಾಗಿರುವುದರಿಂದ ಮಹಿಳಾಪರಾಧದ ಬಗ್ಗೆ ಪ್ರತ್ಯೇಕ ಅಧ್ಯಯನ ಅವಶ್ಯಕತೆ ಇರುವುದರಿಂದ ಅವರ ಮೂಲ ಮತ್ತು ಮಹಿಳಾಪರಾಧಗಳಿಗೆ ಕಾರಣಗಳನ್ನು ಕಂಡು ಹಿಡಿದು ಪ್ರಸ್ತುತ ಸಮಸ್ಯೆಗೆ ಪರಿಹಾರವನ್ನು ಗುರುತಿಸುವ ಪ್ರಯತ್ನವನ್ನು 'ಮಹಿಳಾಪರಾಧಿಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ' ಎಂಬ ನನ್ನ ಸಂಶೋಧನ ಮಹಾಪ್ರಬಂಧದ ಮೂಲಕ ಮಾಡಲಾಗಿದೆ.

**೫.೧ ಅಧ್ಯಯನದಿಂದ ಕಂಡುಬಂದ ಪ್ರಮುಖಾಂಶಗಳು :**

೧. ಬಡತನಕ್ಕೂ ಮತ್ತು ಮಹಿಳಾಪರಾಧಕ್ಕೂ ಒಂದು ನಿಕಟ ಸಂಬಂಧವಿದೆ.

೨. ಹಿಂದುಳಿದ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಅಪರಾಧದ ಪ್ರಮಾಣ ಹೆಚ್ಚು.

೩. ಅನಕ್ಷರತೆ, ವ್ಯಭಿಚಾರ, ಹತಾಶೆ, ವೈಜ್ಞಾನಿಕ ಮತ್ತು ಅವೈಜ್ಞಾನಿಕ ಮಧ್ಯದ ಸಂಘರ್ಷ ಇಂಥವುಗಳು ಮಹಿಳಾಪರಾಧಗಳಾಗುವಂಥ ಪರಿಸ್ಥಿತಿಯನ್ನು ತಂದೊಡ್ಡುತ್ತಿವೆ.

೪. ಅವಿಭಕ್ತ ಕುಟುಂಬ ಮಾದರಿಗಿಂತ ವಿಭಕ್ತ ಕುಟುಂಬ (ಮಾದರಿ)ಗಳ ಮಹಿಳೆಯರಲ್ಲಿ ಅಪರಾಧಗಳು ಹೆಚ್ಚು. ಆದರೆ ಇವೆರಡರಲ್ಲಿ ಅಷ್ಟೇನೂ ದೊಡ್ಡ ಮಟ್ಟದ ಅಂತರವಿಲ್ಲ. ಮುಖ್ಯವಾಗಿ ಅವಿಭಕ್ತ ಮತ್ತು ವಿಭಕ್ತ ಇವೆರಡರಲ್ಲಿರುವ ಕೆಲ ನ್ಯೂನ್ಯತೆಗಳು ಮಹಿಳಾಪರಾಧಕ್ಕೆ ಕಾರಣವಾಗುತ್ತವೆ.

೫. ಅವಿವಾಹಿತರಿಗಿಂತ ವಿವಾಹಿತ ಮಹಿಳೆಯರಲ್ಲಿಯೇ ಅಪರಾಧದ ಪ್ರಮಾಣ ಹೆಚ್ಚು.

೬. ಗ್ರಾಮೀಣ ಪ್ರದೇಶಕ್ಕಿಂತ ನಗರ ಪ್ರದೇಶದ ಮಹಿಳೆಯರು ಹೆಚ್ಚು ಅಪರಾಧಗಳನ್ನೆಸಗುವವರಾಗಿರುತ್ತಾರೆಂಬುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

೭. ಹೆಣ್ಣು ಮಗಳೆಂದು ತಂದೆ-ತಾಯಿಗಳು ಮಾಡುವ ತಾರತಮ್ಯ, ತಾತ್ಸಾರ, ನಿರ್ಲಕ್ಷ, ವಿವಾಹ ವಿಷಯದಲ್ಲಿ ಅಭಿಪ್ರಾಯ ಕೇಳದೇನೇ ತಂದೆ/ತಾಯಿ ತೆಗೆದುಕೊಳ್ಳುವ ನಿರ್ಧಾರ, ಒತ್ತಾಯಪೂರ್ವಕ ವಿವಾಹಗಳಂಥವು ಮಹಿಳಾಪರಾಧಕ್ಕೆ ಕಾರಣಗಳಾಗುತ್ತವೆ.

೮. ಗ್ರಾಮೀಣ ಪ್ರದೇಶದ ಕುಟುಂಬಗಳಲ್ಲಿ ಸೊಸೆಯನ್ನು ಹಿಂಸಿಸುವುದು, ಪೀಡಿಸುವುದು, ವರದಕ್ಷಿಣೆ, ಸಂಶಯ ಪಡುವುದು, ಅನೈತಿಕ ಸಂಬಂಧ, ಮೂಢನಂಬಿಕೆ, ಕ್ಷುಲ್ಲಕ ಜಗಳ ಇಂಥವುಗಳಿಂದ ಮಹಿಳಾಪರಾಧಗಳಾಗುತ್ತಿವೆ.

೯. ನೌಕರಿ ಮತ್ತು ಅಂತಸ್ತು-ಐಶ್ವರ್ಯವಂತನಿದ್ದವನು ಅಸಮರ್ಥನಿದ್ದರೂ, ವಯಸ್ಸಾದವನಿದ್ದರೂ ಹರೆಯಕ್ಕೆ ಬಂದ ಯುವತಿಯರನ್ನು ವಿವಾಹ ಮಾಡಿಕೊಡುವ ಅಂಶಗಳೆಲ್ಲ ವಿವಾಹವಾದ ಮಹಿಳೆ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಇದರಿಂದ ಮಾನಸಿಕ ಮತ್ತು ದೈಹಿಕ ಅಸಮತೋಲನ ಹೊಂದಿ ಅಡ್ಡದಾರಿಗಳನ್ನು ಹಿಡಿದು ಅಪರಾಧಿಗಳಾದ ಬಗ್ಗೆ ತಿಳಿದುಬರುತ್ತದೆ.

೧೦. ಮಹಿಳೆಯರು ಎಲ್ಲಾ ತರಹದ ಅಪರಾಧಗಳನ್ನು ಮಾಡುತ್ತಾರೆ. ಅವರು ಸಹ ಪುರುಷರಷ್ಟೇ ಧೈರ್ಯವಂತರಿದ್ದಾರೆಂಬುದಕ್ಕೆ ಈ ಅಧ್ಯಯನವೇ ಸಾಕ್ಷಿಯಾಗಿದೆ.

೧೧. ವಿಧವೆ, ಗಂಡಬಿಟ್ಟ, ವಿಚ್ಛೇದಿತ ಮತ್ತು ತಂದೆ/ತಾಯಿ ಇಬ್ಬರ ಮರಣದಿಂದಾಗುವ ವಿಘಟಿತ ಮನೆಯಿಂದ ಬಂದ ಮಹಿಳೆಯರು ಅಪರಾಧಗಳನ್ನೆಸಗುವುದು ಸಾಮಾನ್ಯ.

೧೨. ಅಪ್ರಾಪ್ತ ವಯಸ್ಸಿನಲ್ಲಿ ವಿವಾಹವಾದ (ಬಾಲ್ಯವಿವಾಹ) ಮಹಿಳೆಯರಲ್ಲಿ ಅಪರಾಧಗಳು ಘಟಿಸುವುದು ಕಂಡುಬರುತ್ತದೆ.

೧೩. ಸಂಪ್ರದಾಯಬದ್ಧ ವಿವಾಹಗಳು ವಿವಾಹವಾಗಬೇಕಾದ ಮಹಿಳೆಯ ಇಚ್ಛೆಯಂತಾಗಿರದೆ ಮನೆಯವರ ಏಕಪಕ್ಷೀಯ ನಿರ್ಧಾರದ ಮೇಲೆ ನಡೆಯುತ್ತವೆ. ಇದರಿಂದ ವಿವಾಹಿತ ಮಹಿಳೆ ಹೊಸ ಪರಿಸರದಲ್ಲಿ ಎಲ್ಲರೂ ಅಪರಿಚಿತರೊಂದಿಗಿರಬೇಕಾದುದರಿಂದ ನಾನಾ ತರಹದ ಸಮಸ್ಯೆಗಳನ್ನೆದುರಿಸಬೇಕಾಗಿ ಬರುವುದರಿಂದ ಅಂತಹ ಪರಿಸ್ಥಿತಿಗಳೇ ಅಪರಾಧಗಳಾಗುವಂತೆ ಮಾಡುತ್ತವೆ. ಆದಕ್ಕಾಗಿ ಸಂಪ್ರದಾಯ ವಿವಾಹ ಮಹಿಳಾಪರಾಧಕ್ಕೆ ಕಾರಣವಾಗುತ್ತದೆಂಬುದನ್ನು ಈ ಅಧ್ಯಯನ ಎತ್ತಿ ತೋರಿಸಿದೆ.

**೫.೨ ಪ್ರಾಕ್‌ಕಲ್ಪನೆಗಳ ಪರೀಕ್ಷಣೆ :**

ಅಧ್ಯಯನದಿಂದ ಕಂಡುಕೊಂಡ ಪ್ರಮುಖಾಂಶಗಳೊಂದಿಗೆ ಈಗ ಪ್ರಾಕ್‌ಕಲ್ಪನೆಗಳೆಲ್ಲವೂ ಸರಿಯಾದವುಗಳೆ? ಸಂಶೋಧನಾಧ್ಯಯನದ ಮೂಲವೇ ಅವುಗಳಾಗಿರುವಾಗ ಅವುಗಳನ್ನು ಪರೀಕ್ಷಿಸಿ ಖಾತರಿಪಡಿಸಿಕೊಳ್ಳುವುದು ಸೂಕ್ತವೆನಿಸುತ್ತದೆ. ಅವುಗಳೆಂದರೆ -

೧. ಮಹಿಳಾಪರಾಧಕ್ಕೆ ಬಡತನ ಒಂದು ಪ್ರಮುಖ ಕಾರಣವಾಗಿದೆ ಎಂಬ ಪ್ರಾಕ್‌ಕಲ್ಪನೆಯು ಸತ್ಯವಾದುದೆಂದು ಈ ಅಧ್ಯಯನವು ಸಾಬೀತುಪಡಿಸುತ್ತದೆ. ಒಟ್ಟು ಮಹಿಳಾಪರಾಧಿಗಳನ್ನು ತೆಗೆದುಕೊಂಡಾಗ ಅದರಲ್ಲಿ ಉದ್ಯೋಗ ಮತ್ತು ಆದಾಯಕ್ಕೆ ಸಂಬಂಧಿಸಿದಂತೆ ನೋಡಲಾಗಿ ಅಪರಾಧಿ ಮಹಿಳೆಯರಲ್ಲಿ ಬಡವರು ಅಗ್ರಸ್ಥಾನದಲ್ಲಿರುವುದು ಕಂಡುಬರುತ್ತದೆ. ಸಂಶೋಧಕರಾದ ಶಾಸ್ತ್ರಿ (೧೯೭೬)ಯವರೂ ಸಹ ಬಡತನ ಮತ್ತು ಮಹಿಳಾಪರಾಧಕ್ಕೆ ನಿಕಟ ಸಂಬಂಧ ಕಲ್ಪಿಸಿರುತ್ತಾರೆ. ಆದುದರಿಂದ ನನ್ನ ಈ ಸಂಶೋಧನೆಯ ಒಂದನೆಯ ಪೂರ್ವ ಪ್ರಾಕ್‌ಕಲ್ಪನೆಯು ಧನಾತ್ಮಕವಾಗಿದೆ.

೨. ಮಹಿಳಾಪರಾಧಕ್ಕೆ ಸಾಮಾಜಿಕ ಮತ್ತು ಕೌಟುಂಬಿಕ ಪರಿಸ್ಥಿತಿ ಮತ್ತು ಪರಿಸರಗಳು ಮೂಲ ಕಾರಣಗಳಾಗಿವೆ ಎಂಬ ಪೂರ್ವ ಸಿದ್ಧಾಂತವು ಸಹ ಸತ್ಯವಾದುದಾಗಿದೆ. ಬೇರೆ ಬೇರೆ ಹಲವಾರು ಸಂಶೋಧನೆಗಳಿಂದಲೂ ಸತ್ಯವಾದುದೆಂದು ಸಾಭೀತಾಗಿದೆ. ಈ ಸಂಶೋಧನೆಯೂ ಸಹ ಮಹಿಳಾಪರಾಧಿಗಳ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗೆ ಬಹಳಷ್ಟು ಒತ್ತು ಕೊಟ್ಟುದುದರ ಆಧಾರದ ಮೇಲೆ ಈ ಪ್ರಾಕಲ್ಪನೆಯು ಸತ್ಯವಾದುದೆಂದು ಹೇಳಲಾಗುತ್ತದೆ. ಸಂಶೋಧಕರಾದ ಪುನೇಕರ ಮತ್ತು ಕಮಲಾರಾವ್‌ರವರ ಅಧ್ಯಯನಗಳು ಸಹ ಕುಟುಂಬದ ಸದಸ್ಯರು ಕೆಟ್ಟದ್ದಾಗಿ ಉಪಚರಿಸುವುದು ಮಹಿಳಾಪರಾಧಕ್ಕೆ ಕಾರಣವಾಗುತ್ತದೆಂದಿದ್ದಾರೆ. ಇವರು ಸಾಮಾಜಿಕ-ಕೌಟುಂಬಿಕ ಪರಿಸ್ಥಿತಿಗಳ ಮೇಲೆ ಬೆಳಕು ಚೆಲ್ಲಿ ಮಹಿಳಾಪರಾಧಕ್ಕೆ ಸಾಮಾಜಿಕ - ಕೌಟುಂಬಿಕ ಪರಿಸರ ಕಾರಣವೆಂದಿದ್ದಾರೆ.

೩. ''ಮಹಿಳಾಪರಾಧಗಳಲ್ಲಿ ಮಾನವ ದೇಹಕ್ಕೆ ಸಂಬಂಧಿತ ಅಪರಾಧಗಳನ್ನೆಸಗಿದವರ ಪ್ರಮಾಣ ಹೆಚ್ಚು.''

ಈ ಮೇಲಿನ ಪ್ರಾಕ್‌ಕಲ್ಪನೆಗೆ ಸಂಬಂಧಿಸಿದಂತೆ ಸಂಶೋಧನೆಗೆ ಸಂಬಂಧಿಸಿದಂತೆ ಪ್ರಶ್ನಾವಳಿಗಳ ಮೂಲಕ ಬೆಂಗಳೂರು ಹಾಗೂ ಬೆಳಗಾವಿ ಕೇಂದ್ರ ಕಾರಾಗೃಹಗಳಲ್ಲಿರುವ ಒಟ್ಟು ೧೦೪

ಮಹಿಳಾಪರಾಧಿಗಳು ಇದರಲ್ಲಿ ಅತಿ ಹೆಚ್ಚು ೮೩ ಮಹಿಳಾಪರಾಧಿಗಳು ಮಾನವ ದೇಹಕ್ಕೆ ಸಂಬಂಧಿಸಿದ ಅಪರಾಧಗಳಿಗೆ ಸಂಬಂಧಿಸಿದವರಾಗಿದ್ದಾರೆ. ಅದಕ್ಕಾಗಿ ಈ ಪೂರ್ವ ಪ್ರಾಕ್ ಕಲ್ಪನೆಯೂ ಕೂಡಾ ಧನಾತ್ಮಕವಾಗಿರುತ್ತದೆ.

೪. ''ಅನಕ್ಷರತೆಯು ಮಹಿಳಾಪರಾಧಕ್ಕೆ ಪ್ರಮುಖ ಕಾರಣಗಳಲ್ಲೊಂದು''

ನನ್ನ ಸಂಶೋಧನೆಗೆ ಸಂಬಂಧಿಸಿದಂತೆ ಪ್ರಶ್ನಾವಳಿಗಳ ಮುಖಾಂತರ ಪಡೆದ ದತ್ತಾಂಶಗಳ ವಿಶ್ಲೇಷಣೆಯನ್ನು ಕೈಗೊಂಡಾಗ ಪ್ರಮುಖವಾಗಿ ಕಂಡುಬಂದ ಅಂಶಗಳಲ್ಲಿ ಅನಕ್ಷರತೆಯು ಕೂಡಾ ಮಹಿಳಾಪರಾಧಕ್ಕೆ ಮುಖ್ಯ ಕಾರಣಗಳಲ್ಲಿ ಪ್ರಮುಖವಾದುದು. ಆದುದರಿಂದ ಈ ಪ್ರಾಕ್‌ಕಲ್ಪನೆಯೂ ಧನಾತ್ಮಕವಾಗಿರುತ್ತದೆ.

**೫.೩ ಸುಧಾರಣಾ ಕ್ರಮಗಳು (CORRECTIONAL PROCESS) :**

ಮಹಿಳಾಪರಾಧಿಗಳ ಪ್ರಮಾಣ ಬಹಳಷ್ಟು ಕಡಿಮೆ ಪ್ರಮಾಣದಲ್ಲಿರುವುದರಿಂದ ಅಪರಾಧಿಕ ಕಾನೂನು ವ್ಯವಸ್ಥೆ (Criminal Justice) ಮೂಲಕ ಸುಲಭವಾಗಿ ನಿರ್ಮೂಲನೆ ಮಾಡಬಹುದೆಂಬ ಭಾವನೆ ಇದೆ. ಈ ಅಭಿಪ್ರಾಯ ಸರಿಯಾದುದಲ್ಲ. ಮಹಿಳಾಪರಾಧಿಗಳನ್ನು ನಿರ್ಲಕ್ಷಿಸುವುದು ನಾಗರಿಕ ಸಮಾಜದ ಲಕ್ಷಣವಲ್ಲ. ಮಹಿಳಾಪರಾಧಿಗಳನ್ನು ನ್ಯಾಯಾಲಯಗಳಲ್ಲಿ ಸಮಾನವಾಗಿ ನೋಡಿದರೂ ಜೈಲುಗಳಲ್ಲಿ ಮತ್ತು ಸುಧಾರಣಾ ಕಾರ್ಯ ವಿಧಾನದಲ್ಲಿ ಪಕ್ಷಪಾತದಿಂದ ನೋಡಲಾಗುತ್ತದೆ. ಜೈಲುಗಳಲ್ಲಿ ನಾನಾ ತರಹದ ಭೇದಭಾವದಿಂದ ನೋಡಲಾಗುತ್ತಿದೆ. ನಾನು ನೋಡಿದಂತೆ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿದ್ದಂತ ಸೌಲಭ್ಯಗಳು ಬೆಳಗಾವಿ ಕೇಂದ್ರ ಕಾರಾಗೃಹದಲ್ಲಿ ಸಿಗುವುದಿಲ್ಲ. ಪುರುಷ ಕೈದಿಗಳಿಗಿರುವ ಸ್ವಾತಂತ್ರ್ಯ-ಸೌಲಭ್ಯಗಳು ಮಹಿಳಾ ಕೈದಿಗಳಿಗೆ ದೊರೆಯುವುದಿಲ್ಲ. ಅಂದರೆ ಕಾರಾಗೃಹದಿಂದ ಕಾರಾಗೃಹಕ್ಕೂ ಅದರಂತೆ ಪುರುಷ ಮತ್ತು ಮಹಿಳಾ ಕೈದಿಗಳಲ್ಲಿಯೇ ತಾರತಮ್ಯ ಎದ್ದು ಕಾಣುತ್ತದೆ.

ಕಾರಾಗೃಹಗಳಲ್ಲಿರುವ ಮಹಿಳಾಕೈದಿಗಳ ಬದುಕು ಬಹಳಷ್ಟು ಕಠಿಣವಾಗಿದೆ. ಅವರಿಗಿರುವ ಈಗಿನ ಸೌಲಭ್ಯಗಳು ಸಾಲದಾಗಿವೆ. ಈಗಿರುವ ಸೌಲಭ್ಯಗಳನ್ನು ಕೂಡ ಸರಿಯಾಗಿ ಮಹಿಳಾ ಕೈದಿಗಳಿಗೆ ತಲುಪಿಸುತ್ತಿಲ್ಲ. ಜೈಲಿನಲ್ಲಿ ನಡೆಯುವ ಮಹಿಳಾಪರಾಧಿಗಳ ಮನಪರಿವರ್ತನ ಕಾರ್ಯಕ್ರಮಗಳು ಸಮರ್ಪಕವಾಗಿ

ನಡೆಯುವುದಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯ, ಮನಪರಿವರ್ತನಾ ಕಾರ್ಯಕ್ರಮಗಳು ಯಶಸ್ವಿಯಾಗದಿರಲು ಕಾರಣವಾಗಿದೆ. ಮಹಿಳಾಪರಾಧಿಗಳಿಗೆ ಕೊಡಮಾಡುತ್ತಿರುವ ತರಬೇತಿಗಳು ಪರಿಣಾಮಕಾರಿಯಾಗಿಲ್ಲ. ತರಬೇತಿಗಳು ಸಹ ಹೊರಜಗತ್ತಿನಲ್ಲಿ ಗೌಣವೆನಿಸುವ ಕೆಲಸಗಳಾಗಿವೆ. ಸಮಾಜದ ಸಮಸ್ಯೆಗಳನ್ನು ಎದುರಿಸುವ, ಧೈರ್ಯದಿಂದ ಮುನ್ನುಗ್ಗಲಿಕ್ಕೆ ಬೇಕಾದ ದೃಢಮನಸ್ಸನ್ನು ಹೊಂದಲು ಅನುಕೂಲವಾಗುವಂಥ ಯಾವುದೇ ತರಬೇತಿ ಅಥವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿಲ್ಲ. ಪುನರ್ವಸತಿ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ.

ಅಪರಾಧಿಗಳನ್ನು ಸೆರೆಮನೆಯಲ್ಲಿಡುವುದು ಹಾಗೂ ಅವರ ನಡತೆ ಆಧಾರದ ಮೇಲೆ ಬಿಡುಗಡೆ ಮಾಡುವುದು, ಇವುಗಳಲ್ಲಿ ಸೆರೆಮನೆಯಲ್ಲಿಡುವುದೇ ಹೆಚ್ಚು ಬಳಕೆಯಲ್ಲಿದೆ. ಆದರೆ ಮಹಿಳಾಪರಾಧಿಗಳು ಸನ್ನಡತೆಯ ಮೇಲೆ ಬಿಡುಗಡೆ ಹೊಂದಲು ಅರ್ಹರಿದ್ದರೂ ಬಿಡುಗಡೆ ಮಾಡುವುದಿಲ್ಲ. ಸನ್ನಡತೆಯ ಮೇಲೆ ಬಿಡುಗಡೆ ಅಂದರೆ ನ್ಯಾಯಾಲಯವು ಶಿಕ್ಷೆ ನೀಡಿದ ನಂತರ ಜೈಲುಗಳಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವ ಅಪರಾಧಿಯು ತಾನು ಕಾರಾಗೃಹದಿಂದ ತಪ್ಪಿಸಿಕೊಳ್ಳುವುದಿಲ್ಲವೆಂದೂ ಮತ್ತು ತನಗೆ ಕೆಲವು ಕಾಲ ಸ್ವಾತಂತ್ರ್ಯ ಅಂದರೆ ಬಿಡುಗಡೆ ಮಾಡಿದಲ್ಲಿ ಒಳ್ಳೆಯ ನಡತೆಯವರಾಗಿದ್ದುಕೊಂಡು ಮತ್ತೆ ಮರಳಿ ಕಾರಾಗೃಹಕ್ಕೆ ಬರುವೆನೆಂದೂ ಮಾಡುವ ನಂಬಿಕೆಯ ವಾಗ್ದಾನದ ಮೇಲೆ ಬಿಡುಗಡೆ ಮಾಡುವುದಕ್ಕೆ ಸನ್ನಡತೆಯ ಮೇಲೆ ಬಿಡುಗಡೆ ಎಂದು ಕೆಲ ನಿರ್ದಿಷ್ಟ ದಿನಗಳವರಿಗೆ ಕಾರಾಗೃಹದಿಂದ ಹೊರಗೆ ಬಿಡಲಾಗುವುದು. ಈ ವೇಳೆಯಲ್ಲಿ ಮನೆಯವರೊಂದಿಗಿದ್ದು ಸಮಾಜದಲ್ಲಿ ಬೆರೆಯಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇದಕ್ಕೆ ಬಹಳಷ್ಟು ಮಹಿಳಾಪರಾಧಿಗಳು ಅರ್ಹರಿದ್ದರೂ ಅವರಿಗೆ ಈ ಸೌಲಭ್ಯವನ್ನು ದೊರಕಿಸಿಕೊಡುವುದಿಲ್ಲ. ಕೇವಲ ೪% ರಿಂದ ೫% ರಷ್ಟು ಮಾತ್ರ ಇದರ ಸದುಪಯೋಗ ಪಡೆಯುತ್ತಾರೆ.

ಮುಖ್ಯವಾಗಿ ಏಳುವ ಪ್ರಶ್ನೆ ಮಹಿಳಾಪರಾಧಿಗಳಿಗೆ ಸೆರೆಮನೆವಾಸ ಪದ್ಧತಿ ಸರಿಯಾದುದೆ? ಸೆರೆಮನೆ ವಾಸದ ಉದ್ದೇಶವೇನು? ಅಂದರೆ ಕಾರಾಗೃಹಗಳ ಈಗಿನ ಉದ್ದೇಶವೆಂದರೆ -

೧. ಕಾರಾಗೃಹಗಳ ಆಡಳಿತ ಆಯಾ ರಾಜ್ಯದ ಹೊಣೆಗಾರಿಕೆಯಾಗಿದೆ.

೨. ಇವುಗಳಲ್ಲಿ ನ್ಯಾಯಾಲಯದಿಂದ ಶಿಕ್ಷೆಗೊಳಗಾದವರನ್ನು ಇಡುವ ವ್ಯವಸ್ಥೆ ಇರುತ್ತದೆ.

೩. ಮುಖ್ಯ ಉದ್ದೇಶವೆಂದರೆ ಅಪರಾಧಿಗಳಿಂದ ಸಮಾಜವನ್ನು ರಕ್ಷಣೆ ಮಾಡುವುದಾಗಿದೆ.

೪. ಸಮಾಜ ವಿರೋಧಿ ಕಾರ್ಯಗಳನ್ನು ಮಾಡಿದ ವ್ಯಕ್ತಿಗಳ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ.

೫. ಕಾರಾಗೃಹಗಳು ಒಂದು ದೃಷ್ಟಿಯಿಂದ ಅಪರಾಧಿಗಳಿಗೆ ಚಿಕಿತ್ಸೆ ಕೊಡುತ್ತವೆ.

ಮುಂತಾದವುಗಳು ಕಾರಾಗೃಹದ ಉದ್ದೇಶಗಳಾಗಿವೆ. ಇದರಲ್ಲಿ ಸಮಾಜದಿಂದ ಬೇರ್ಪಡಿಸುವುದು, ಪಶ್ಚಾತ್ತಾಪ, ಶಿಕ್ಷೆ ಮತ್ತು ಸುಧಾರಣೆ ಎಂದು ಹೇಳಲಾಗುತ್ತದೆ. ಆದರೆ ಮಹಿಳಾಪರಾಧಿಗಳನ್ನು ಸಮಾಜದಿಂದ ಪ್ರತ್ಯೇಕಿಸುವ ಘನ ಉದ್ದೇಶವಾದರೂ ಏನು? ಅವರು ಸಮಾಜದ ಒಗ್ಗಟ್ಟಿಗೆ ಮಾರಕವಾಗಿದ್ದಾರೆಯೇ? ಸೆರೆಮನೆಯಲ್ಲಿಡುವುದರಿಂದ ಅವರು ಬದಲಾಗುವರೆ? ಇಂತಹ ಶಿಕ್ಷೆಯಿಂದ ಮುಂದೆ ಮಹಿಳೆಯರ ಅಪರಾಧಗಳು ಕಡಿಮೆಯಾಗುತ್ತವೆಯೆ? ಅಥವಾ ಸಂಪೂರ್ಣ ತೊಡೆದು ಹಾಕಿದಂತಾಗುತ್ತದೆಯೆ? ಮಹಿಳಾಪರಾಧಿಗಳು ಜೈಲಿನಲ್ಲಿ ಯೋಗ್ಯ ಉಪಚಾರ ಪಡೆಯುತ್ತಾರೆಯೆ? ನನ್ನ ಪ್ರಕಾರ ಮಹಿಳೆಯರಿಗೆ ಸೆರೆಮನೆವಾಸ ಯೋಗ್ಯವಾದುದಲ್ಲ. ಪುರುಷ ಕೈದಿಗಳಿಂದ ಪ್ರತ್ಯೇಕಿಸಿ ನೋಡಬೇಕಾದ ಅವಶ್ಯಕತೆ ಇರುವುದೆಂದು ಈ ಹಿನ್ನೆಲೆಯಲ್ಲಿಯೇ ಹೇಳಿದ್ದು. ಸಾಮಾಜಿಕ ನ್ಯೂನ್ಯತೆಗಳು ಅದರಲ್ಲೂ ಕೌಟುಂಬಿಕ ಸಮಸ್ಯೆಗಳು ಮತ್ತು ಲಿಂಗ ತಾರತಮ್ಯದಂತಹ ಅನೇಕ ಕಾರಣಗಳು ಮಹಿಳಾಪರಾಧಗಳು ಹೆಚ್ಚಲು ಕಾರಣವಾಗಿದೆ. ಅದರಿಂದ ಎಲ್ಲಾ ಮಹಿಳಾಪರಾಧಿಗಳನ್ನು ಒಂದೇ ದೃಷ್ಟಿಕೋನದಡಿ ನೋಡಿ ಎಲ್ಲರನ್ನೂ ಸೆರೆಮನೆಗೆ ಕಳುಹಿಸುವುದು ಸರಿಯಲ್ಲ. ಸೆರೆಮನೆಗಳ ಪರಿಸರ ಸರಿಯಾದುದಲ್ಲ. ಅಧಿಕಾರಿಗಳ ದುರ್ನಡತೆ-ದುರ್ವ್ಯವಸ್ಥೆ ಎದ್ದು ಕಾಣುತ್ತದೆ. ಅಲ್ಲಿ ಮಹಿಳೆಯರನ್ನಿಡುವುದೆಂದರೆ ಮೃಗಗಳನ್ನು ಪಂಜರದೊಳಗೆ ಹಿಡಿದಿಟ್ಟಂತೆ ಭಾಸವಾಗುತ್ತದೆ. ಅದಕ್ಕಾಗಿ ಸುಧಾರಣೆಯ ದಿಟ್ಟಕ್ರಮ ಕೈಕೊಳ್ಳಬೇಕಾಗಿದೆ.

ಮಹಿಳೆಯನ್ನು ಕಾರಾಗೃಹಗಳಿಗೆ ಕಳಿಸುವುದರಿಂದ ಅವಳ ಕುಟುಂಬದ ವ್ಯವಸ್ಥೆ ಹದಗೆಡುತ್ತದೆ. ಭಾರತದಂಥ ಸಂಪ್ರದಾಯಬದ್ಧ ನಾಡಿನಲ್ಲಿ ಮಹಿಳೆ ಸೆರೆಮನೆಗೆ ಹೋದರೆ ಅವಳ ಪತಿ ಮತ್ತು ಮಕ್ಕಳು ನಾನಾ ತರಹದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ನಿತ್ಯ ಜೀವನದಲ್ಲಿ ಬಿಡಿಸಲಾಗದ ನಾನಾ ಸಮಸ್ಯೆಗಳನ್ನು ಹೊತ್ತುಕೊಳ್ಳಬೇಕಾಗುತ್ತದೆ. ಗಂಡ ಮತ್ತು ಮಕ್ಕಳು ಮಾನಸಿಕವಾಗಿ ಬಳಲುವವರಾಗುತ್ತಾರೆ. ನಾಳಿನ ನಾಗರಿಕರಾಗಬೇಕಾದ ಕಂದಮ್ಮಗಳಿಗೆ ತಾಯಿಯ ಸಂಬಂಧ ಕಳಚಿಕೊಂಡಾಗ ಏನೊಂದು ತಿಳಿಯದ,

ವಿಚಾರಿಸಲೂ ಆಗದಂಥ ಎಳೆ ವಯಸ್ಸಿನಲ್ಲಿ ಮಕ್ಕಳ ಬದುಕು ಬಿರುಗಾಳಿಗೆ ಸಿಕ್ಕಂತಾಗಿಬಿಡುತ್ತದೆ. ತಾಯಿಯೇ ಸಂಪಾದನೆಯ ಏಕಮಾತ್ರ ವ್ಯಕ್ತಿಯಾಗಿದ್ದಲ್ಲಿ ಅವಳೇ ಅಪರಾಧವೆಸಗಿ ಜೈಲು ಸೇರಿದರೆ ಮಕ್ಕಳ ಗತಿ ಏನು? ಇಲ್ಲಿ ಅವಳಿಗಾಗುವ ಕಾನೂನಿನ ಶಿಕ್ಷೆ ಒಂದು ಕಡಿಮೆಯಾದರೆ ಇನ್ನೊಂದು ಕಡೆ ನಿಜವಾದ ಶಿಕ್ಷೆಯಾಗುವುದು ಮಕ್ಕಳಿಗೆ ಎಂಬುದನ್ನು ಎತ್ತಿ ತೋರಿಸಬೇಕಾಗುತ್ತದೆ. ಮಕ್ಕಳ ಶಿಕ್ಷಣ ಕುಂಠಿತವಾಗುತ್ತದೆ, ಮಾನಸಿಕ ಮತ್ತು ದೈಹಿಕವಾಗಿ ಅಸಮತೋಲನಕ್ಕೊಳಗಾಗುತ್ತಾರೆ. ಇದರಿಂದ ವ್ಯಕ್ತಿತ್ವವೇ ರೋಗಗ್ರಸ್ಥವಾಗುತ್ತದೆ. ಅಂಥ ಮಕ್ಕಳು ಸಮಾಜವಿರೋಧಿ ಶಕ್ತಿಯಾಗಿಯೂ ಬೆಳೆಯಬಹುದು. ಇದರ ಬಗ್ಗೆ ಹೆಚ್ಚಿನ ಸಂಶೋಧನೆಗಳಾಗಬೇಕಿವೆ. ಅಂಥ ಮಕ್ಕಳನ್ನು ಗುರುತಿಸಿ ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡುವ ಎಲ್ಲ ತರದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ನನಗನಿಸಿದಂತೆ ಕಾರಾಗೃಹಗಳ ಬಗ್ಗೆ ಇತ್ತೀಚೆಗೆ ಆಲೋಚಿಸುತ್ತಿರುವ ತಜ್ಞರ ಅನಿಸಿಕೆಯಂತೆ ಅಪರಾಧಿಗಳನ್ನು ರೋಗಿಗಳಂತೆ ಉಪಚರಿಸಿ ಮಾನವೀಯ ಆಧಾರದ ಮೇಲೆ ಹೊಸ ಬದುಕು ಕಟ್ಟಿಕೊಳ್ಳಲು ಅನುಕೂಲ ಮಾಡಿಕೊಡುವುದೂ ಸಹ ಆಯಾ ಸರಕಾರಗಳ ಕರ್ತವ್ಯವಾಗಬೇಕು. ಆದರೆ ಅದು ಇಂದು ಆಗುತ್ತಿಲ್ಲ. ಆದುದರಿಂದ ಕಾರಾಗೃಹವಾಸದಿಂದ ಬದಲಾವಣೆಯಾಗಬೇಕಾದ ಮಹಿಳೆ ಅಲ್ಲಿಯ ಹದಗೆಟ್ಟ ಪರಿಸರದಿಂದ ಇನ್ನಷ್ಟು ಅವಳು ನಡತೆ ಕೆಟ್ಟವಳಾಗುತ್ತಿದ್ದಾಳೆಂದರೂ ತಪ್ಪಾಗಲಾರದು. ಇಲ್ಲಿ ಖಾರವಾಗಿ ಪ್ರಶ್ನಿಸಲೇ ಬೇಕಾದುದೆಂದರೆ ಆಕಸ್ಮಿಕ ತಪ್ಪನ್ನೆಸಗಿದ ಮಹಿಳೆಯನ್ನು ಇನ್ನಷ್ಟು ನಡತೆಗೆಟ್ಟವಳನ್ನಾಗಿಸಲು ಕಾರಾಗೃಹಕ್ಕೆ ಕಳುಹಿಸಲಾಗುತ್ತಿದೆಯೇ ? ತಜ್ಞರು, ಸುಧಾರಣಾವಾದಿಗಳು ಚಿಂತಿಸಬೇಕಾದ ವಿಷಯವಾಗಿದೆ.

ನನ್ನ ಪ್ರಕಾರ ಮಹಿಳಾಪರಾಧಿಗಳನ್ನು ಅನೇಕ ಗುಂಪುಗಳನ್ನಾಗಿ ವಿಂಗಡಿಸುವುದು ಅವಶ್ಯವಾಗಿದೆ. ಅದರಲ್ಲಿ ಕೆಲವು ಗುಂಪುಗಳು ಮಾತ್ರ ಸೆರೆಮನೆ ಶಿಕ್ಷೆಗೆ ಅರ್ಹರು ಎಂಬುದು ನನ್ನ ಅಭಿಪ್ರಾಯ. ನಾನು ಮಹಿಳಾಪರಾಧಿಗಳನ್ನು ಏಳು ಗುಂಪುಗಳಲ್ಲಿ ವಿಂಗಡಿಸುತ್ತೇನೆ. ಅವುಗಳೆಂದರೆ -

೧. ಬಡತನದ

೨. ಅನಕ್ಷರತೆಯ

೩. ಹತಾಶಳಾದ

೪. ಭಾವನಾತ್ಮಕವಾದ

೫. ಸೇಡಿನ

೬. ಆಕಸ್ಮಿಕವಾದ

೭. ವ್ಯಭಿಚಾರದ ಅಥವಾ ದಾರಿತಪ್ಪಿದ

ಇದರಲ್ಲಿ ಸೇಡಿನ ಮತ್ತು ದಾರಿತಪ್ಪಿದ ಮಹಿಳಾಪರಾಧಿಗಳು ಮಾತ್ರ ಕಾರಾಗೃಹವಾಸದ ಶಿಕ್ಷೆಗೆ ಅರ್ಹರು. ಇನ್ನುಳಿದಂತೆ ಉಳಿದವರಿಗೆ ಕಾರಾಗೃಹವಾಸದ ಬದಲಾಗಿ ನಡತೆಯನ್ನು ತಿದ್ದಿಕೊಂಡು ಸಮಾಜದಲ್ಲಿ ಒಳ್ಳೆಯ ನಾಗರಿಕರಾಗಿ ಬದುಕಲು ಅವಕಾಶ ಕೊಡಬೇಕು. ಅವಶ್ಯಕತೆ ಇದ್ದರೆ ಜೈಲಿಗೆ ಪರ್ಯಾಯವಾಗಿ ಇನ್ನೊಂದು ಮಾರ್ಗ ಕಂಡುಕೊಳ್ಳಬೇಕು. ಉದಾಹರಣೆಗೆ; ತೆರೆದ ಕಾರಾಗೃಹಗಳು (Open Prison) ಮತ್ತು ಮಹಿಳಾಪರಾಧಿಗಳಿಗಾಗಿ ಪ್ರತ್ಯೇಕ ಬಡಾವಣೆಗಳು ಇತ್ಯಾದಿ.

**೫.೪ ಕೆಲವು ಉಪಯುಕ್ತ ಸಲಹೆಗಳು :**

- ಮಹಿಳೆಯರನ್ನು ಬಂಧಿಸುವಾಗ ಅಥವಾ ಬಂಧನದಲ್ಲಿರುವಾಗ ಮಹಿಳಾ ಪೊಲೀಸರು ಅವರನ್ನು ನೋಡಿಕೊಳ್ಳಬೇಕು.

- ಉಚಿತ ಕಾನೂನು ನೆರವನ್ನು ಅವಶ್ಯವಿದ್ದ ಮಹಿಳೆಯರಿಗೆ ದೊರಕಿಸಿಕೊಡಬೇಕು. ಈಗಿನ ವ್ಯವಸ್ಥೆ ಅಷ್ಟು ಪರಿಣಾಮಕಾರಿಯಾಗಿಲ್ಲ. ಅದಕ್ಕಾಗಿ ಮಾರ್ಪಾಡುಗಳಾಗಬೇಕು. ಇಲ್ಲವೆ ತಮಗಿಷ್ಟ ಬಂದ ವಕೀಲರನ್ನಿಟ್ಟುಕೊಳ್ಳಲು ಆರ್ಥಿಕ ನೆರವು ನೀಡಬೇಕು.

- ನ್ಯಾಯಾಲಯಗಳು ಸಾಧ್ಯವಾದಷ್ಟು ಮಹಿಳಾಪರಾಧಿಗಳನ್ನು ನಡತೆಯ ಆಧಾರದ ಮೇಲೆ ಬಿಡುಗಡೆ ಮಾಡುವಂಥ ಉದಾರ ನೀತಿ ಅನುಸರಿಸಬೇಕು. ಸಾಧ್ಯವಾದರೆ ಸರ್ಕಾರ ಕಾನೂನಿನಲ್ಲಿ ತಿದ್ದುಪಡಿ ತರಬೇಕು.

- ಮಹಿಳಾಪರಾಧಿಗಳು ಆತ್ಮಗೌರವದಿಂದ ಬದುಕುವಂತೆ ಮಾಡಲು ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಅಂತಹ ಕಾರ್ಯಕ್ರಮಗಳು ಸಮರ್ಪಕವಾಗಿ ನಡೆಯುವಂತೆ ಮೇಲ್ವಿಚಾರಣೆಗಾಗಿ ಅಧಿಕಾರಿಗಳನ್ನು ನೇಮಿಸಬೇಕು.

❖ ದೀರ್ಘಕಾಲದ ಶಿಕ್ಷೆ ಅನುಭವಿಸುವ ಮಹಿಳೆಯರಿಗೆ ಕನಿಷ್ಠ ಆರು ತಿಂಗಳಿಗೊಮ್ಮೆ ಒಂದು ವಾರದಿಂದ ಹದಿನೈದು ದಿನಗಳವರೆಗೆ ನಂಬಿಕೆ ವಾಗ್ದಾನದ (Parole) ಮೇಲೆ ಬಿಡುಗಡೆ ಮಾಡಬೇಕು. ಇಂತಹ ಕ್ರಮಗಳಿಂದ ಮಹಿಳೆಯರಿಗೆ ಮನೆಯವರೊಂದಿಗೆ ಹಾಗೂ ಸಮಾಜದೊಂದಿಗೆ ಹೊಂದಿಕೊಂಡು ಆತ್ಮಗೌರವದಿಂದ ಬಾಳಲು ಸಹಾಯಕವಾಗುತ್ತದೆ. ಅವರ ಕೌಟುಂಬಿಕ ಸಂಬಂಧಗಳನ್ನು ಗಟ್ಟಿಗೊಳಿಸಿದಂತಾಗುತ್ತದೆ.

**೫.೫ ಸಲಹೆಗಳು :**

❖ ಮಹಿಳೆಯರು ಮುಖ್ಯವಾಗಿ ಅವರ ನಡವಳಿಕೆ ಬಗ್ಗೆ ಮನೆಯಲ್ಲಿ ಯಾರ ಸಂಶಯಕ್ಕೂ, ಅಪಹಾಸ್ಯಕ್ಕೂ, ತಿರಸ್ಕಾರಕ್ಕೂ ಗುರಿಯಾಗದಂತಹ ರೀತಿಯಲ್ಲಿ ಶಿಸ್ತಿನಿಂದ ಬದುಕುವುದನ್ನು ರೂಢಿಸಿಕೊಳ್ಳಬೇಕು. ಅವಸರದ ನಿರ್ಧಾರ ಇರಬಾರದು. ಸಮಚಿತ್ತದಿಂದ ಎಲ್ಲವನ್ನೂ ತೂಗಿನೋಡಿ ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಚಾಣಾಕ್ಷತನವಿರಬೇಕು. ಯಾಕೆಂದರೆ ತಪ್ಪು ನಿರ್ಧಾರಗಳು ಗಂಡಾಂತರವನ್ನು ತಂದೊಡ್ಡಬಲ್ಲವು. ತನ್ನ ಬಯಕೆ ಅಥವಾ ಆಸೆ-ಆಕಾಂಕ್ಷೆಗಳ ಈಡೇರಿಕೆಗಾಗಿ ಕಾನೂನು ಬಾಹಿರವೆನಿಸಿದರೂ ಮಾಡುವ ತಪ್ಪುಗಳು ಜೀವನದ ದಿಕ್ಕನ್ನೇ ಬದಲಿಸಬಲ್ಲವು. ಒಮ್ಮೆ ಅಪರಾಧಿಯಾದರೆ ಪುನಃ ಸಮಾಜ ಸಾಮಾನ್ಯರಂತೆ ಸ್ವೀಕರಿಸುವುದಿಲ್ಲ. ನಾವೆಷ್ಟೇ ನೆಮ್ಮದಿಯಿಂದ ಪುನಃ ಸಮಾಜದಲ್ಲಿ ಮೊದಲಿನಂತೆ ಬದುಕಬೇಕೆಂದರೂ ಬದುಕು ವಿಚಿತ್ರವಾಗಿಬಿಡುತ್ತದೆ. ಸಮಾಜ ಗುಮಾನಿಯಿಂದಲೇ ನೋಡುತ್ತಿರುತ್ತದೆ. ಜನಸಾಮಾನ್ಯರ ನೋಟದಲ್ಲಿರುವ ಅನುಮಾನ, ತಿರಸ್ಕಾರ ಅಪಹಾಸ್ಯಗಳೆಲ್ಲ ಹಿಂದೆ ಅಪರಾಧಿಯಾಗಿದ್ದವಳ ಸುತ್ತ ಗಿರಕಿ ಹೊಡೆಯುತ್ತ ಬದುಕನ್ನು ಸುಗಮವನ್ನಾಗಿಸದೆ ಅಧೋಗತಿಯತ್ತ ಒಯ್ಯುತ್ತವೆ. ಬರೀ ಚಿಂತೆ, ನೋವು-ಅವಮಾನಗಳೊಂದಿಗೆ ಅಭದ್ರತೆ-ಹತಾಶೆ ಕೂಡಿಕೊಂಡು ಮತ್ತದೇ ಕಾನೂನುಬಾಹೀರ ಕೃತ್ಯಗಳತ್ತ ವಾಲುವಂತಾಗುತ್ತದೆ. ಅದಕ್ಕಾಗಿ ಜನರ ಮನೋಧರ್ಮದಲ್ಲಿಯೂ ಪ್ರಗತಿಪರ ಬದಲಾವಣೆಗಳಾಗಬೇಕು. ಸುಶಿಕ್ಷಿತ-ಸುಸಂಸ್ಕೃತ ಜೀವನ ನಮ್ಮದಾಗಬೇಕು. ಇದರಿಂದ ಮಾತ್ರ ಮಹಿಳೆಯರು ಅಪರಾಧಿಗಳಾಗದಂತೆ ತಡೆಯಬಹುದಾಗಿದೆ.

❖ ಕಾರಾಗೃಹಗಳಲ್ಲಿರುವ ಮಹಿಳಾಪರಾಧಿಗಳಿಗೆ ಆರೋಗ್ಯಕರ ವಾತಾವರಣ ಕಲ್ಪಿಸಿಕೊಡಬೇಕು. ಮನೆಯವರೊಂದಿಗೆ ಮಾತನಾಡುವ ಮತ್ತು ಸಮಾಲೋಚಿಸುವುದಕ್ಕಾಗಿ ಮುಕ್ತ ವಾತಾವರಣ

ಮಾಡಿಕೊಟ್ಟರೆ ಮನೆಯಿಂದ ಸಂಬಂಧ ಕಳಚಿಕೊಂಡಿದ್ದೇವೆಂಬ ಭಾವನೆ ಮಹಿಳಾಪರಾಧಿಗಳಲ್ಲಿ ಬರುವುದಿಲ್ಲ. ಈಗಿನ ನಿಯಮಾವಳಿಗಳಂತೆ೧೫ ದಿನಗಳಿಗೊಮ್ಮೆ ಭೆಟ್ಟಿಯ ಅವಕಾಶವಿದೆ. ಇದು ಸರಿಯಲ್ಲ. ಪ್ರತಿದಿನವೂ ಭೆಟ್ಟಿಯಾಗುವ ಅವಕಾಶ ಕಲ್ಪಿಸಿದರೆ ಒಳ್ಳೆಯದು. ಇದರಿಂದ ಅವಳ ಕುಟುಂಬದೊಂದಿಗಿನ ಅವಳ ಸಂಬಂಧ ಗಟ್ಟಿಯಾಗುಳಿಯುತ್ತದೆ.

❖ ಕಾರಾಗೃಹ ಅಧಿಕಾರಿಗಳು ಹೇಳುವಂತೆ ಬಿಡುಗಡೆಗೊಂಡ ಮಹಿಳೆಯನ್ನು ಸಿಬ್ಬಂದಿಯೊಂದಿಗೆ ಅವಳ ಮನೆಗೆ ಕಳುಹಿಸಿದರೆ ಗಂಡನ ಮನೆ ಹಾಗೂ ತವರು ಮನೆ ಎರಡೂ ಕಡೆಯವರು ಮನೆಯೊಳಗೆ ತೆಗೆದುಕೊಳ್ಳಲು ನಿರಾಕರಿಸಿದ ಉದಾಹರಣೆಗಳು ಸಾಕಷ್ಟಿವೆ ಎಂದು. ಅಂಥವರಿಗೆ ಆಸರೆಯಾಗಿ ಕೆಲವೊಂದು ಸ್ವಯಂ ಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತವೆಯಾದರೂ ಅವುಗಳೂ ಕೂಡ ಒಂದು ಧರ್ಮ ಅಥವಾ ದೇವಾಲಯಕ್ಕೆ ಸೀಮಿತವಾಗಿ ತಮ್ಮದೇ ಚೌಕಟ್ಟಿನೊಳಗಡೆ ಕಾರ್ಯನಿರ್ವಹಿಸುವುದರಿಂದ ಅಲ್ಲಿ ಸೇರಿದ ಮಹಿಳೆಯರಲ್ಲಿ ಅನಾಥಪ್ರಜ್ಞೆ ಕಾಡಬಹುದು. ಆದಕ್ಕಾಗಿ ಸರ್ಕಾರವೇ ಪುನರ್‌ವಸತಿ ಕಲ್ಪಿಸಿಕೊಡುವುದು ತುಂಬಾ ಅಗತ್ಯವಾಗಿದೆ.

❖ ಜೈಲಿನಲ್ಲಿರುವ ಮಹಿಳಾ ಕೈದಿಗಳೆಲ್ಲರೂ ಕಾನೂನಿನ ದೃಷ್ಟಿಯಲ್ಲಿ ಅಪರಾಧಿಗಳಾಗಿರಬಹುದು. ಆದರೆ ಅವರಲ್ಲಿ ಕೆಲ ಸಂಖ್ಯೆಯ ಮಹಿಳೆಯರು ಬಲಿಪಶುವಾದುದು ಕಂಡುಬರುತ್ತದೆ. ಇದು ರಾಮಾಯಣದ ನೆನಪನ್ನು ತರುತ್ತದೆ. ಶ್ರೀರಾಮನಿಗಷ್ಟೇ೧೪ ವರ್ಷ ವನವಾಸದ ಶಿಕ್ಷೆಯಾಗಿದ್ದರೂ ಅವನೊಂದಿಗೆ ಸೀತೆ ಮತ್ತು ಲಕ್ಷ್ಮಣನೂ ಶಿಕ್ಷೆ ಅನುಭವಿಸಿದ ಉದಾಹರಣೆ ಇದೆ. ಇದು ವೈದಿಕ ಧರ್ಮದ ತಳಹದಿಯ ಮೇಲೆ ನಿರ್ಮಾಣವಾದ ವ್ಯವಸ್ಥೆ. ಅಂತಹ ವಿಭಿನ್ನ ಮನಸ್ಥಿತಿ ನಮ್ಮದಾಗಿದೆ. ಅಂದರೆ ಭಾವನಾತ್ಮಕ ಸಂಬಂಧಗಳಿಂದಲೂ ಬಲಿಪಶುಗಳಾದ ಉದಾಹರಣೆಗಳು ಸಿಗುತ್ತವೆ. ಯಾರೊಬ್ಬರೂ ಬಲಿಪಶುವಾಗದಂತೆ ಪೊಲೀಸ್ ವ್ಯವಸ್ಥೆ ಗಮನಹರಿಸಬೇಕು.

❖ ಅಪರಾಧ ಪ್ರಕರಣಗಳಲ್ಲಿ ತನಿಖಾಧಿಕಾರಿಯ ಮೇಲೆ ಹೇರುವ ಪ್ರಭಾವ, ಭ್ರಷ್ಟಾಚಾರ, ದುರುದ್ದೇಶಗಳಿಂದಲೂ ಮಹಿಳೆಯರನ್ನು ಸಿಲುಕಿಸುವ ಪ್ರಕರಣಗಳು ನಡೆಯುತ್ತಿರುತ್ತವೆ. ಆದಕ್ಕಾಗಿ

ಕಾನೂನಿನ ಚೌಕಟ್ಟಿನೊಳಗೆ ದಕ್ಷತೆಯಿಂದ ತನಿಖೆ ನಡೆಯುವಂಥ ವ್ಯವಸ್ಥೆಯಾಗಬೇಕು. ತನಿಖಾಧಿಕಾರಿಯನ್ನಾಗಿ ಪೊಲೀಸ್ ಅಧಿಕಾರಿಯ ಬದಲಾಗಿ ನ್ಯಾಯಾಧೀಶರನ್ನು ನೇಮಿಸುವ ವ್ಯವಸ್ಥೆಯಾಗಬೇಕು. ಇದರಿಂದ ನಿರಪರಾಧಿಗಳು ಬಲಿಪಶುವಾಗುವುದನ್ನು ತಡೆದಂತಾಗುತ್ತದೆ.

- ಪ್ರತಿಯೊಬ್ಬರಿಗೂ ಕಾನೂನಿನ ಮೂಲಕ ನ್ಯಾಯ ದೊರಕಿಸಿಕೊಳ್ಳಲು ಮತ್ತು ತಮಗಾದ ಅನ್ಯಾಯಕ್ಕೆ ಪರಿಹಾರ ಕಂಡುಕೊಳ್ಳಲು ಅವಕಾಶವಿರುತ್ತದೆ. ಆದರೆ ಬಹಳಷ್ಟು ಜನ ಬಡವರಾದುದರಿಂದ ಅವರಿಗೆ ಯೋಗ್ಯವಾದ ವಕೀಲರ ಸೇವೆ ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಉಚಿತ ಕಾನೂನು ಸೇವೆ ಒದಗಿಸುವ ವ್ಯವಸ್ಥೆಯು ತನ್ನ ಧ್ಯೇಯೋದ್ಧೇಶದಂತೆ ಪರಿಣಾಮಕಾರಿ ಸೇವೆ ಒದಗಿಸಿಕೊಡುವಲ್ಲಿ ಆಸಕ್ತಿದಾಯಕವಾಗಿಲ್ಲ. ಈ ನಿಟ್ಟಿನಲ್ಲಿ ಸರ್ಕಾರಗಳು ಆಲೋಚಿಸಿ ಪರಿಣಾಮಕಾರಿಯಾದ ಕಾನೂನು ಸೇವೆ ಒದಗಿಸುವ ವ್ಯವಸ್ಥೆ ಮಾಡಬೇಕು.

- ಕಾರಾಗೃಹಗಳಲ್ಲಿಡುವ ಉದ್ದೇಶವೆಂದರೆ ಕೇವಲ ಶಿಕ್ಷಿಸುವುದಕ್ಕಾಗಿ ಅಲ್ಲ. ಆರೋಗ್ಯಕರ ಚಿಕಿತ್ಸಾಕ್ರಮಗಳಿಂದ ಮನಪರಿವರ್ತನೆ ಮಾಡುವ ಮಾನವೀಯ ಉದ್ದೇಶದಿಂದ. ಅದಕ್ಕಾಗಿ ಈ ಅಂಶ ಎಲ್ಲರಲ್ಲೂ ಮಾರ್ದನಿಸುವಂತಾಗಬೇಕು. ಸರ್ಕಾರ ಮೂಲ ಸೌಕರ್ಯ ಒದಗಿಸಿ ಕಾರಾಗೃಹಗಳಲ್ಲಿ ಆರೋಗ್ಯಕರ ವಾತಾವರಣ ಕಲ್ಪಿಸಿಕೊಡಬೇಕು.

- ಇಂದಿನ ಸಮಾಜದಲ್ಲಿ ಯಾವ ಮಾರ್ಗದಿಂದ ಮುಂದೆ ಬಂದವರೆಂಬುದು ಮುಖ್ಯವಾಗದೆ ಒಟ್ಟಿನಲ್ಲಿ ಮುಂದೆ ಬಂದಿದ್ದೇ ವಿಜೃಂಭಿಸುತ್ತಿರುವಾಗ ಎಲ್ಲರ ಗಮನ ಹೇಗಾದರೂ ಸರಿ ದುರ್ಮಾರ್ಗಗಳನ್ನು ಹಿಡಿದು ಮುಂದೆ ಹೋದರೆ ಸಾಕು ಎಂಬಂಥ ಮನೋಭಾವನೆ ಬೆಳೆಯುತ್ತಿರುವುದು ವಿಶಾಧನೀಯ. ಒಳ್ಳೆಯ ಸ್ತ್ರೀ-ಪುರುಷರನ್ನು ಗುರುತಿಸಿ ಬೆಳೆಸುವ, ಗೌರವಿಸುವ ಪ್ರವೃತ್ತಿ ಎಲ್ಲರಲ್ಲಿಯೂ ಬೆಳೆಯಬೇಕು. ಅಂದಾಗ ಮಾತ್ರ ಅಪರಾಧವನ್ನು ತಡೆಗಟ್ಟಲಿಕ್ಕಾಗುವುದು.

- ಬಾಲ್ಯದಲ್ಲಿ ತಂದೆ ಅಥವಾ ತಾಯಿ ಯಾರಾದರೊಬ್ಬರನ್ನು ಅಥವಾ ಇಬ್ಬರನ್ನೂ ಕಳೆದುಕೊಂಡ ಮಕ್ಕಳು ಸರಿಯಾದ ಆರೈಕೆಯಿಲ್ಲದೆ, ಮಾರ್ಗದರ್ಶನವಿಲ್ಲದೆ, ಶಿಕ್ಷಣವಿಲ್ಲದೆ ವ್ಯಕ್ತಿತ್ವದಲ್ಲಿ ಅಸಮತೋಲನ ಹೊಂದಿ

ಮಾನಸಿಕ ಮತ್ತು ಶಾರೀರಿಕ ಕಾರಣಗಳಿಂದಲೂ ಅಪರಾಧಿಕ ಪ್ರವೃತ್ತಿ ಬೆಳೆಸಿಕೊಂಡ ಮಹಿಳೆಯರ ಉದಾಹರಣೆಗಳಿವೆ. ಅಂಥವರನ್ನು ಗುರುತಿಸಿ ಚಿಕಿತ್ಸೆ ಮೂಲಕ ಅಪರಾಧಿಕ ನಡವಳಿಕೆಯನ್ನು ತಿದ್ದಿ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವ ಕೆಲಸಗಳಾಗಬೇಕು.

- ಅಪರಾಧವೆಂಬುದು ನಾಗರಿಕ ಸಮಾಜದ ವ್ಯವಸ್ಥೆಯನ್ನು ಬುಡಮೇಲು ಮಾಡುವಂಥ ಸಮಾಜಘಾತುಕ ಕೆಲಸವಾಗಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗಂತೂ ದೊಡ್ಡ ತಡೆಗೋಡೆಗಳಾಗಿವೆ. ದೊಡ್ಡ ದೊಡ್ಡ ಅಪರಾಧಿ ಗುಂಪುಗಳು ದೇಶದ ವ್ಯವಸ್ಥೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಹಂತಕ್ಕೆ ಬೆಳೆದ ಉದಾಹರಣೆಗಳು ಸಹ ಜಾಗತಿಕ ಮಟ್ಟದಲ್ಲಿ ಬೆಳೆದು ನಿಂತಿದ್ದು ಕಂಡುಬರುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಗಂತೂ ಇದು ಮಾರಕ. ಅದಕ್ಕಾಗಿ ಅಪರಾಧಗಳನ್ನು ಆರಂಭದ ಹಂತದಲ್ಲಿದ್ದಾಗಲೇ ಗುರುತಿಸಿ ಅಗತ್ಯ ಕಾನೂನಿನ ಕ್ರಮ ತೆಗೆದುಕೊಳ್ಳಬೇಕಾದುದು ಇಂದಿನ ಅವಶ್ಯಕತೆಗಳಲ್ಲೊಂದು. ಅದು ಜಾತಿ ವ್ಯವಸ್ಥೆಯ ಭಾರತದಲ್ಲಿ ಕಷ್ಟಕರವಾದರೂ ಜಾತಿ-ಜನಾಂಗ-ಧರ್ಮಕ್ಕಿಂತಲೂ ದೇಶದ ಅಭಿವೃದ್ಧಿಯೇ ತಮ್ಮ ಧ್ಯೇಯ ಎಂಬಂಥ ಮನೋಭಾವನೆಯ ಜನನಾಯಕರ ಆಗಮನದಿಂದ ಮಾತ್ರ ಅದು ಸಾಧ್ಯ. ಇಲ್ಲವೆಂದರೆ ಇಂದಿನ ಕಲುಷಿತ ವಾತಾವರಣದಲ್ಲಿ ಭಯೋತ್ಪಾದಕನಾದವನು/ಭಯೋತ್ಪಾದಕಳಾದವಳು ತನ್ನ ಜಾತಿ/ಧರ್ಮದವಳೆಂಬ/ಧರ್ಮದವನೆಂಬ ಒಂದೇ ಕಾರಣಕ್ಕಾಗಿ ಭಯೋತ್ಪಾದಕ ಕೃತ್ಯ ಸಮರ್ಥಿಸಿಕೊಳ್ಳುವ ದುರ್ಬುದ್ಧಿಯ ನಾಯಕರಿಂದ ದೊಡ್ಡ ಮಟ್ಟದ ಆಂತರಿಕ ಗಲಭೆಗಳು ಹೆಚ್ಚಾಗಿ ದೇಶ ಅಭಿವೃದ್ಧಿಹೀನವಾಗುತ್ತದೆ. ಜನಸಾಮಾನ್ಯರು ನೆಮ್ಮದಿಯಿಂದ ಬದುಕುವುದಕ್ಕಾಗುವುದಿಲ್ಲ. ನಾಗರಿಕ ಸಮಾಜದ ಆಶಯವೇ ಸತ್ತು ಹೋಗುತ್ತದೆ. ಹೀಗಾಗದಂತೆ ತಡೆಯುವ ಜವಾಬ್ದಾರಿ ಪ್ರತಿಯೊಬ್ಬ ಪ್ರಜೆಯ ಮೇಲೂ ಇರುತ್ತದೆ. ಈ ನಿಟ್ಟಿನಲ್ಲಿ ಸಂಶೋಧನಾಧ್ಯಯನಗಳು ಆಗಬೇಕು. ಅಂತಹ ಅಧ್ಯಯನಗಳನ್ನು ಗಂಭೀರವಾಗಿ ಪರಿಗಣಿಸುವ ಪ್ರಗತಿಪರರು, ಚಿಂತಕರು, ಜನನಾಯಕರು ಬೇಕು.

- ದೀರ್ಘಾವಧಿ ಶಿಕ್ಷೆಯನ್ನನುಭವಿಸುತ್ತಿರುವ ಮಹಿಳೆಯರನ್ನು ತಮ್ಮ ಸಂಬಂಧ ತಮ್ಮ ಕುಟುಂಬದೊಂದಿಗೆ ಕಡಿದುಹೋಗದಂತೆ ಸಂಬಂಧ ಬೆಸೆಯುವ ನಿಟ್ಟಿನಲ್ಲಿ ಕುಟುಂಬದ ಸದಸ್ಯರೊಂದಿಗೆ ಮುಕ್ತವಾಗಿ ಬೆರೆಯುವಂತೆ ಮಾಡಲು ಕಾರಾಗೃಹಗಳಲ್ಲಿ ಪ್ರತ್ಯೇಕ ಬಡಾವಣೆಗಳನ್ನು ನಿರ್ಮಿಸಬೇಕು. ಅಥವಾ ತೆರೆದ ಕಾರಾಗೃಹಗಳನ್ನು ನಿರ್ಮಿಸುವ ವ್ಯವಸ್ಥೆ ಕಲ್ಪಿಸಿಕೊಡಬೇಕು.

❖ ಬಹಳಷ್ಟು ಹದಿ-ಹರೆಯದ ಮಹಿಳೆಯರು ಅತಿಯಾದ ಲೈಂಗಿಕಾಸಕ್ತಿಯಿಂದ ಬೇರೆಯವರೊಂದಿಗೆ ಅನೈತಿಕ ಸಂಬಂಧ ಹೊಂದಿ ಗಂಡನ ಕೊಲೆ ಮಾಡಿದ ಪ್ರಕರಣಗಳಿವೆ. ಇಂದು ಸೆಕ್ಸ್ ಅನ್ನು ಮೋಜಿಗಾಗಿ ಎಂಬಂತೆ ಹದಿಹರೆಯದವರು ತಿಳಿದುಕೊಂಡಿದ್ದಾರೆ. ಮೊಬೈಲ್ ಮೂಲಕ ಸಣ್ಣಗೆ ಪ್ರಾರಂಭವಾದ ಮಾತು ಅವರಿಬ್ಬರನ್ನು ಹತ್ತಿರಕ್ಕೆ ತಂದು ಅಶ್ಲೀಲ ಸಂಭಾಷಣೆ, ಅಶ್ಲೀಲ ಮೆಸೇಜು, ಅಶ್ಲೀಲ ಚಿತ್ರಗಳು ಇಂಥವುಗಳಿಂದ ಮನಸ್ಸು ಮತ್ತು ದೇಹ ವಿಕೃತ ಕಾಮನೆಗೊಳಗಾಗುತ್ತವೆ. ಇದರಲ್ಲಿ ಸಂಯಮ ದೂರದೃಷ್ಟಿ, ಬದುಕಿನ ಕುರಿತು ಸಾಧಕ-ಬಾಧಕಗಳ ಕುರಿತು ಚಿಂತನೆಗಳಾವುವೂ ಇರುವುದಿಲ್ಲ. ದುಡುಕಿನ ನಿರ್ಧಾರದಲ್ಲಿ ಅಪರಾಧವೆಸಗಿ ಅಪರಾಧಿಗಳಾಗಿ ಜೈಲು ಸೇರಿದಾಗಲೇ ತಾವು ಇಷ್ಟೊಂದು ದೊಡ್ಡ ತಪ್ಪು ಮಾಡಿದ್ದೀವಾ? ಚಿಂತೆಗೆ, ಪಶ್ಚಾತ್ತಾಪಕ್ಕೆ ಶುರುವಾಗಿ ಮನಪರಿವರ್ತನೆ ಪ್ರಾರಂಭವಾಗುವುದು ಜೈಲಿನಲ್ಲೆಂಬುದು ಬಹಳಷ್ಟು ಮಹಿಳೆಯರ ಅನಿಸಿಕೆ. ಆದುದರಿಂದ ಇಲ್ಲಿ ಗುರುತಿಸಬೇಕಾದ ಅಂಶಗಳೆಂದರೆ ಯುವಕರಲ್ಲಿರುವ ಲೈಂಗಿಕ ಶಿಕ್ಷಣದ ಕೊರತೆ, ಕಾನೂನಿನ ಜ್ಞಾನವಿಲ್ಲದಿರುವುದು, ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವುದರಲ್ಲಿನ ಮಹಿಳೆಯರ ಪಾತ್ರ, ಕುಟುಂಬ, ಸಮಾಜ ಮತ್ತು ಮೌಲ್ಯಾಧಾರಿತ ಬದುಕು ಇವುಗಳ ಬಗ್ಗೆ ಅರಿವು ಮೂಡಿಸುವ ಕೆಲಸಗಳಾಗಬೇಕು.

❖ ಗಂಡನ ಕೊಲೆಯೊಂದೇ ತಮ್ಮ ಸುಗಮ ಬದುಕಿಗೆ ಪರಿಹಾರವೆಂಬಂತೆ ತಿಳಿದು ಕೊಲೆ ಮಾಡುವ ಬದಲಾಗಿ ಕಾನೂನಿನ ಮೂಲಕ ವಿಚ್ಛೇದನ ಪಡೆಯುವುದು ಉತ್ತಮ. ಇದಕ್ಕೆ ಸಮಾಜವೂ ಸ್ಪಂದಿಸಬೇಕು. ಮುಖ್ಯವಾಗಿ ಪುರುಷರ ಮನೋಧರ್ಮ ಬದಲಾಗಬೇಕು. ಈ ಸಮಾಜದಲ್ಲಿ ತನ್ನ ಕುಟುಂಬದ ಹೆಣ್ಣು ಅವಳ ಆಯ್ಕೆಯ ಗಂಡಸಿನೊಂದಿಗೆ ವಿವಾಹವಾಗಲೂ ಸಹ ಕುಟುಂಬದ ಪ್ರತಿಷ್ಠೆ ಗೌರವದ ಬಗ್ಗೆ ಆ ಕುಟುಂಬದ ಗಂಡಸರಾದವರಲ್ಲಿ ಕಾಡುತ್ತಲಿರುತ್ತದೆ. ಗಂಡನಾದವನಿಗೂ ಸಹ ತನ್ನ ಹೆಂಡತಿ ತನ್ನನ್ನು ಬಿಟ್ಟು ಬೇರೊಬ್ಬ ಗಂಡಸಿನೊಂದಿಗೆ ಬದುಕುವುದೆಂದರೆ ಅವರನ್ನು ಕೊಲೆ ಮಾಡುವುದೇ ತನ್ನ ಪುರುಷತ್ವಕ್ಕೆ ತಕ್ಕುದಾದುದೆಂದು ಕೊಲೆ ಮಾಡಿದರೆ ಪುರುಷತ್ವ ಸಾಬೀತು ಪಡಿಸಿದಂತಾಗುತ್ತದೆಂದು ನಂಬಿದವರಿದ್ದಾರೆ. ಅದಕ್ಕಾಗಿ ನಮ್ಮನ್ನು ಕೊಲ್ಲುವ ಮುಂಚೆ ಅವನನ್ನೇ ಕೊಲ್ಲುವುದು ನಮಗುಳಿದ ದಾರಿ ಎಂಬಂತೆ ಹೆಂಡತಿ ಮತ್ತು ಅವಳೊಂದಿಗೆ ಅನೈತಿಕ ಸಂಬಂಧ ಹೊಂದಿದವನ ನಿರ್ಧಾರವಾಗಿ ಬಿಡುತ್ತದೆ. ಈ ದಿಕ್ಕಿನಲ್ಲಿ

ಜನ-ಸಾಮಾನ್ಯರು ವಿಚಾರಿಸುವಂತಾಗಬೇಕು. ಸರ್ಕಾರ ಕಾನೂನಿನ ಕ್ರಮ ಕೈಕೊಳ್ಳಬೇಕು. ಮಾಧ್ಯಮದ ಮೂಲಕ ಅರಿವು ಮೂಡಿಸಬೇಕು. ವಿಚ್ಛೇದನ ಬಯಸಿದವರಿಗೆ ಸರಳವಾಗುವಂತೆ ಕಾನೂನು ರೂಪಿಸಬೇಕು. ಹೆಣ್ಣು-ಗಂಡು ತಮಗೆ ಸರಿ ಹೊಂದಿದವರೊಂದಿಗೆ ಬದುಕುವ ಹಕ್ಕಿಗೆ ರಕ್ಷಣೆ ಕೊಡಬೇಕು.

❖ ಅಸಮತೋಲನ ಮನಸ್ಥಿತಿ ಮಹಿಳಾಪರಾಧಕ್ಕೊಂದು ಕಾರಣ. ಅದು ಕುಟುಂಬದ ಪರಿಸರದಿಂದಾದುದು. ಮಗಳ ಬಗ್ಗೆ ತಿಳಿದುಕೊಳ್ಳುವ ಅವಳ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ತಂದೆ-ತಾಯಿಗಳಿರಬೇಕು. ತೊಂದರೆ ಗಮನಿಸಿ ಬಗೆಹರಿಸಬೇಕು, ನಡವಳಿಕೆಯ ಬಗ್ಗೆ ಆಗಾಗ ಗಮನ ಕೊಡುತ್ತಿರಬೇಕಾದುದು ಸಹ ತಂದೆ-ತಾಯಿಗಳಾದವರ ಕರ್ತವ್ಯವಾಗಬೇಕು.

❖ ಮುಖ್ಯವಾಗಿ ಇಂದಿನ ಯುವ ಸಮುದಾಯವು ಸಿನೇಮಾ, ಹಾಡು, ನೃತ್ಯ, ನಾಟಕಗಳಂತ ಹವ್ಯಾಸಗಳಿಗಿಂತ ಧ್ಯಾನ, ಯೋಗ, ವ್ಯಾಯಾಮ, ಒದುವುದು ಬರೆಯುವುದು ಮತ್ತು ಸಮಾಜ ಸೇವೆ ಇಂತವುಗಳಿಂದ ಶ್ರೇಷ್ಠ ವ್ಯಕ್ತಿತ್ವ ಬೆಳೆಸಿಕೊಳ್ಳುವುದರತ್ತ ದಾಪುಗಾಲನ್ನಿಡಬೇಕು. ಇದರಿಂದ 'ಅಪರಾಧರಹಿತ ಸಮಾಜ'ವನ್ನಾಗಿ ರೂಪಿಸಿಕೊಳ್ಳುವುದಕ್ಕಾಗುತ್ತದೆ.

❖ ಮನುಷ್ಯ ತಪ್ಪು ಮಾಡುವುದು ಸಹಜ, ಪರಿಸರ -ಪರಿಸ್ಥಿತಿಗಳಿಂದ ಆಕಸ್ಮಿಕ ತಪ್ಪುಗಳಾಗಿರುತ್ತವೆ. ಆದರೆ ಶಿಕ್ಷೆ ಅನುಭವಿಸಿದಾಗ ಸಂಪೂರ್ಣ ಮನಪರಿವರ್ತನೆಯಾಗಿರುತ್ತದೆ. ಪುನಃ ಅವರು ಮರಳಿದಾಗ ಬದುಕಲು ಅವಕಾಶ ಮಾಡಿಕೊಡಬೇಕು. ಜನಸಮುದಾಯ ತುಚ್ಛವಾಗಿ ಕಾಣಬಾರದು. ಅವರ ಮೇಲೆ ಯಾವುದೇ ತರಹದ ದೌರ್ಜನ್ಯಗಳಾಗದಂತೆ ನೋಡಬೇಕು.

❖ ಮುಖ್ಯವಾಗಿ ಗಂಡ-ಹೆಂಡತಿಯರಿಬ್ಬರಲ್ಲಿಯ ಹೊಂದಾಣಿಕೆ ಅಭಾವ, ದುರ್ಘಟನೆಗಳಿಗೆ ಕಾರಣವಾಗುತ್ತಿರುತ್ತವೆ. ಗಂಡ-ಹೆಂಡತಿಯರ ಭಿನ್ನಾಭಿಪ್ರಾಯದಲ್ಲಿ ಮೂರನೇ ವ್ಯಕ್ತಿಯ ಪ್ರವೇಶಕ್ಕೆ ಅವಕಾಶ ಕೊಡದೆ ತಮ್ಮ ಕುಟುಂಬದ ವ್ಯವಹಾರ ಅವರಲ್ಲಿಯೇ ಇರಬೇಕು. ತಮ್ಮಿಬ್ಬರ ಸಮಸ್ಯೆಗೆ ತಾವುಗಳೇ ಪರಿಹಾರ ಕಂಡುಕೊಳ್ಳಬೇಕು. ಗಂಡನಾದವನೂ ತನ್ನ ಜವಾಬ್ದಾರಿಗಳನ್ನು ಎಚ್ಚರಿಕೆಯಿಂದ ಸರಿಯಾಗಿ ನಿರ್ವಹಿಸಬೇಕು. ತಮ್ಮ ಕುಟುಂಬ ಒಡೆದು ಹೋಗದಂತೆ ಎಚ್ಚರಿಕೆಯಿಂದ ಕಾಪಾಡಿಕೊಂಡು ಹೋಗುವ ಜವಾಬ್ದಾರಿ ಗಂಡ-ಹೆಂಡತಿ ಇಬ್ಬರ ಮೇಲೂ ಇರುತ್ತದೆ.

- ಬಹಳಷ್ಟು ಮಹಿಳೆಯರು ತಮ್ಮ ಅನೈತಿಕ ಸಂಬಂಧ ಮುಚ್ಚಿಟ್ಟುಕೊಳ್ಳಲು ಗಂಡನ ಮೇಲೆ ಹಿಂಸೆಯ ಆಪಾದನೆಗಳನ್ನು ಮಾಡುವವರಾಗಿರುತ್ತಾರೆ. ಇದರಿಂದ ಮನೆಯ ಪರಿಸರ ಹಾಳಾಗುತ್ತದಲ್ಲದೆ ಅವರ ಮುಂದಿನ ಬದುಕಿಗೂ ಹಾನಿಕರ. ಹೀಗೆ ಕೆಟ್ಟದ್ದಾಗಿ ಅಶಾಂತಿಯಿಂದ ಬದುಕುವುದಕ್ಕಿಂತ ಗಂಡನೊಂದಿಗಿರಬೇಕೆ? ಅಥವಾ ಅನೈತಿಕ ಸಂಬಂಧ ಹೊಂದಿದವನೊಂದಿಗಿರಬೇಕೆ? ಒಂದು ತೀರ್ಮಾನಕ್ಕೆ ಬಂದು ಯಾವುದಕ್ಕೂ ಕಾನೂನಿನ ಮೂಲಕ ಪರಿಹಾರ ಕಂಡುಕೊಳ್ಳುವುದು ಸೂಕ್ತ. ಒಟ್ಟಿನಲ್ಲಿ ಇಂದಿನ ಬದಲಾದ ಪರಿಸ್ಥಿತಿಗನುಗುಣವಾಗಿ ಮಹಿಳೆಗೆ ತನಗೆ ಸರಿ ಹೊಂದುವವನೊಂದಿಗೆ ವಿವಾಹವಾಗುವ ಮುಕ್ತ ಸ್ವಾತಂತ್ರ್ಯವಿರಬೇಕು. ಆದರೆ ಸ್ವಾತಂತ್ರ್ಯ ದುರುಪಯೋಗವಾಗಬಾರದು. ತಾನಿಡುತ್ತಿರುವ ಹೆಜ್ಜೆ, ಸರಿಯಾದುದೇ ಎಂದು ಹಲವಾರು ಬಾರಿ ವಿಚಾರಿಸಿದಾಗಲೇ ಹೆಜ್ಜೆಯನ್ನಿಡಬೇಕು. ಯಾಕೆಂದರೆ ವಯಸ್ಸು ಯಾವ ಗಡಿಯಾರವನ್ನೂ ನೋಡಿ ಸರಿಯುತ್ತಿರುವುದಿಲ್ಲ. ಬೇಗ ನೆಲೆ ಕಂಡುಕೊಂಡಷ್ಟು ಕ್ಷೇಮಕರ. ಮುಂದಿನ ಪೀಳಿಗೆಗೂ ಉತ್ತಮ ಬುನಾದಿ ಹಾಕಿಕೊಡಲು ಸಾಧ್ಯವಾಗುತ್ತದೆ.

- ಜೈಲು ಅಂತ ಅನುಭವಕ್ಕೆ ಬರುವುದು ಒಂದು ದಿನ ಜೈಲು ವಾಸದಿಂದಲೂ ಸಾಧ್ಯ. ನಾವು ಏಕೆ ಮಾಡುತ್ತೇವೆಂದು? ಹೀಗೆಕಾಯಿತೆಂದು? ಪಶ್ಚಾತ್ತಾಪವಾಗುತ್ತಿರುತ್ತದೆ. ಹೆಚ್ಚಿನ ಜನ ಬಡವರಾದ ನಮಗೆ ಸಮಾಜದ ಬಗ್ಗೆ ಅರಿವು ಇರುವುದಿಲ್ಲ. ಕಾನೂನಿನ ಜ್ಞಾನ ಇರುವುದಿಲ್ಲ. ಒಳ್ಳೆಯ ವಕೀಲರನ್ನಿಟ್ಟು ನಿರಪರಾಧಿಗಳೆನಿಸಿಕೊಳ್ಳಲಾಗಿರುವುದಿಲ್ಲ. ಅದಕ್ಕಾಗಿ ಈ ಅಂಶಗಳನ್ನೆಲ್ಲ ಗಮನಿಸಿ ಸರ್ಕಾರ ನಮಗೆ ವಿನಾಯತಿ ಕೊಡಬೇಕೆಂಬ ಬೇಡಿಕೆ ಕೆಲ ಮಹಿಳಾಪರಾಧಿಗಳದ್ದಾಗಿದೆ. ಅವರಲ್ಲಿರುವ ಈ ವಿಚಾರಗಳನ್ನು ಅಥವಾ ಬೇಡಿಕೆಗಳನ್ನು ಮಾನವೀಯ ದೃಷ್ಟಿಯಿಂದ ಪರಿಗಣಿಸಬೇಕು.

- ಬಡತನ ಒಂದು ಪಿಡುಗು. ಅದು ಮಹಿಳಾಪರಾಧಕ್ಕೆ ಕಾರಣವಾಗುತ್ತದೆ. ಅದರತ್ತ ಸರ್ಕಾರ ಗಮನಹರಿಸಿ ಬಡವರ ಸ್ಥಿತಿ-ಗತಿಯನ್ನು ಉತ್ತಮಗೊಳಿಸುವತ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಆರ್ಥಿಕ ಅಸಮಾನತೆಯನ್ನೇ ಆಧಾರವಾಗಿಟ್ಟುಕೊಂಡು ಹುಟ್ಟಿದ ನಕ್ಸಲೈಟ್ ಚಳುವಳಿಗಳಂತವು ಅಪರಾಧಿಕ ಗುಂಪುಗಳಾಗಿ ಮಾರ್ಪಡುತ್ತಲಿವೆ. ಅವುಗಳಲ್ಲೂ ಸಹ ಮಹಿಳೆಯರು ಸಕ್ರೀಯರಾಗಿದ್ದಾರೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಬಡತನ ಹೋಗಲಾಡಿಸುವ ಪ್ರಯತ್ನ ನಡೆಯಬೇಕು.

- ಮಹಿಳಾಪರಾಧಕ್ಕೆ ಕಾರಣಗಳಲ್ಲಿ ಇನ್ನೊಂದು ಪ್ರಮುಖ ಕಾರಣವಾದ ಅನಕ್ಷರತೆ ಸಂವಿಧಾನದ ಆಶಯವಾದ ಎಲ್ಲರಿಗೂ ಖಡ್ಡಾಯ ಶಿಕ್ಷಣ ಒದಗಿಸಬೇಕೆಂಬುದು ಇನ್ನೂ ಈಡೇರದ ವಿಷಯ ವಿಷಾಧನೀಯ. ಇನ್ನಾದರೂ ಪ್ರತಿಯೊಬ್ಬರಿಗೂ ಶಿಕ್ಷಣ ನೀಡುವ ಕೆಲಸವಾಗಬೇಕು.

- ಪರಿಣಾಮಕಾರಿಯಾಗಿ ಅಪರಾಧ ತಡೆಗಟ್ಟಬೇಕಾದರೆ ಕೇವಲ ಕಾನೂನುಗಳನ್ನು ರೂಪಿಸಿದರೆ ಸಾಲದು. ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ಹೆಚ್ಚಿನ ಅನುದಾನ ಕೊಡ-ಮಾಡುವ ಮೂಲಕ ಕೊಳಚೆ ಪ್ರದೇಶಿಗರ ಜೀವನಮಟ್ಟ ಸುಧಾರಣೆ, ವಿಧವೆ-ಅಂಗವಿಕಲರು, ವೃದ್ಧರು, ನಿರ್ಗತಿಕರು, ರೋಗಿಗಳು ಮತ್ತು ಅಸಹಾಯಕ ಜನರನ್ನು ಗಮನದಲ್ಲಿಟ್ಟುಕೊಂಡು ಸಮಾಜಕಲ್ಯಾಣ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

❖❖❖